ಪುಸ್ತಕದ ಹಾಳೆಗಳಲ್ಲಿಟ್ಟು ಕಾಪಿಡುತ್ತಿದ್ದೆ, ಅವರು ತಮ್ಮ ಗೆಳೆಯರೊಂದಿಗೆ ಕಳೆದ ಕಥೆಗಳನ್ನು ಕಿವಿ ತುಂಬಿಸಿಕೊಳ್ಳುತ್ತಿದ್ದೆ. ಇದೊಂಥರಾ ಮಹಾಭಾರತದ ಕಥೆಯನ್ನು ಸಂಜಯ ಧೃತರಾಷ್ಟ್ರನಿಗೆ ಹೇಳಿದಂತೆ ಬಣ್ಣಿಸುತ್ತಿದ್ದರು. ಅದರಲ್ಲಿ ಸತ್ಯವೆಷ್ಟೋ, ಸುಳ್ಳು ಎಷ್ಟೋ ಗೊತ್ತಿಲ್ಲ. ಆದರೆ ಅವರು ಮನೆಯವರಿಗೆ ಸುಳ್ಳು ಹೇಳಿ, ಅವರನ್ನು ನಂಬಿದರೆ ಹೊರತು, ಪ್ರೀತಿಸಿದವರನ್ನು ಮದುವೆಯಾಗಲಿಲ್ಲ. ಮದುವೆ ಎಂದ ತಕ್ಷಣ ಜಾತಿ, ಅಂತಸ್ತು, ಮನೆತನ, ಮುಂತಾದ ನೆಪಗಳನ್ನು ಹೇಳಿ ದೂರವಾದರು. ಬಿಟ್ಟ ನಂತರದ ಇವರ ಸಂಕಷ್ಟಗಳನ್ನು ನೋಡಿ ನೋಡಿ, ಕೇಳಿ ಕೇಳಿ ನಾನು ಆ ಕಾಲಕ್ಕೆ ಗಂಡು ಜಾತಿಯನ್ನೇ ದ್ವೇಷಿಸುತ್ತಿದ್ದೆ. ಅವರೆಲ್ಲ ಮೋಸ ಮಾಡಲೇ ಹುಟ್ಟಿದ್ದಾರೆ ಎಂಬಂತೆ ಕವಿತೆಗಳನ್ನು ಬರೆದು ಆ ಕವಿತೆಗಳನ್ನು ದೋಣಿ ಮಾಡಿ ಮಳೆ ನೀರಿನಲ್ಲಿ ತೇಲಿ ಬಿಡುತ್ತಿದ್ದೆ!

ಆದರೆ ಈ ಎಲ್ಲ ಕಥೆಗೆ ತಳಪಾಯವೆಂದರೆ ಅದು ಚಿಕ್ಕಮಗಳೂರಿನ ಜಿಟಿ ಜಿಟಿ ಮಳೆ. ಆ ಮಳೆಯಲ್ಲಿ ಅದೆಂತಹ ಸಂವಹನ ಶಕ್ತಿ ಇದೆ ಎಂದು ನನಗೆ ಅನೇಕ ಸಲ ಅನ್ನಿಸಿದ್ದಿದೆ. ನನ್ನ ತವರೂರು ಸಾಲಿಗ್ರಾಮದಲ್ಲಿ ಮಳೆ ಬಂದ ತಕ್ಷಣ ಅದು ಎಲ್ಲಿಂದಲೋ ಹಿಂದಿನ ದಿನ ನೆನೆಸಿದ್ದ ಕಡಲೆಕಾಳನ್ನು ಉಸ್ಲಿ ಮಾಡಿ ಬಿಸಿ ಬಿಸಿಯಾಗಿ ಬಸ್‌ಸ್ಟ್ಯಾಂಡಿನಲ್ಲಿ ಮಾರುತ್ತಿದ್ದ ಅನಂತಣ್ಣ, ಅವನ ಮಕ್ಕಳು ಕಣ್ಣ ಮುಂದೆ ಬರುತ್ತಿದ್ದರು. ಚಿಕ್ಕಮಗಳೂರಿನಲ್ಲಿ ಅಂತಹ ಯಾವುದೇ ಉಸ್ಲಿ ಮಾರುವವರು ಇರುತ್ತಿರಲಿಲ್ಲ. ಆದರೆ ಮೋರಿಯ ಪಕ್ಕ ಮಾರುತ್ತಿದ್ದ ಬಿಸಿಬಿಸಿ ಪಕೋಡಗಳಿಗೆ ಅದೆಷ್ಟು ಜನ ಮುಕರುತ್ತಿದ್ದರೆಂದರೆ ಅದನ್ನು ನೋಡುವುದೇ ಒಂದು ಹಬ್ಬ. ಹೀಗೇ ಕಾಯಿಸಿದ ಬೋಂಡಾ ಎಣ್ಣೆ ಇಳಿಯುವ ಮುನ್ನವೇ ಹೊಟ್ಟೆ ಸೇರುತ್ತಿತ್ತು. ಆ ಎಣ್ಣೆಯೋ ಅದೆಷ್ಟು ದಿನಗಳಿಂದ ಬೋಂಡಾಗಳನ್ನು ತೇಲಿಸಿ ತೇಲಿಸಿ ಕಪ್ಪು ಸಮುದ್ರವೇ ಬಾಣಲಿಗಿಳಿದಂತೆ ಕಾಣುತ್ತಿತ್ತು. ಅದೆಲ್ಲವನ್ನು ಲೆಕ್ಕಾಚಾರ ಮಾಡುವ ವಯಸ್ಸು ನಮ್ಮದಲ್ಲ. ಮಳೆ ಕಡಿಮೆಯಾದ ತಕ್ಷಣ ಮೊದಲು ಓಡುತ್ತಿದ್ದದ್ದೇ ಒಂದು ಪಾನಿಪುರಿ ಅಂಗಡಿಗೆ ಮತ್ತೊಂದು ಬೋಂಡಾ ಅಂಗಡಿಗೆ, ಅವೆರಡರಲ್ಲಿ ಒಂದಕ್ಕೆ ಯಾರಾದರೂ ಗೆಳತಿಯರು ಕೊಡಿಸಬೇಕಿತ್ತು. ಇಲ್ಲ ನಾವೇ ಪರೀಕ್ಷೆ ಫೀಸು ಅಂತಾನೋ, ಪೆನ್ನು, ಬುಕ್ಕು ಅಂತಾನೋ ಅಲ್ಲೇ ಇಲ್ಲಿ ಸೇರಿಸಿಟ್ಟ ಹಣ ತೆಗೆದು ಬೈಟು ಮಾಡೋ, ಇಲ್ಲ ಒಂದು ಪಾನಿಪುರಿ ಪ್ಲೇಟಿನ 6 ಪೂರಿಗಳನ್ನು ಒಬ್ಬೊಬ್ಬರು ಒಂದೊಂದು ತಿಂದು ಮತ್ತೆ ಆಕಾಶದ ಕಡೆ ಮುಖ ಮಾಡುತ್ತಿದ್ದೆವು.

ಇಂತಹ ಚಂದದ ಮಳೆಗಾಲ ನಾಲ್ಕು ತಿಂಗಳು ಹೋಗಿ ಆರು ತಿಂಗಳಾದರೂ ಮೊದಮೊದಲು ಗಂಡನ ಮನೆ ಸೇರಿದ ಹೊಸ ಹೆಣ್ಣು ಹೊಂದಿಕೊಳ್ಳಲು ಕಷ್ಟಪಡುವಂತಾದರೂ, ನಂತರ ಗಂಡನ ಮನೆಯೇ ತನ್ನ ಜೀವನದ ಅವಿಭಾಜ್ಯ ಅಂಗವೇ ಆಗುವಂತೆ ನಾವೂ ಮಳೆಗಾಲಕ್ಕೆ ಹೊಂದಿಕೊಂಡೆವು.

ಒಂದು ವರ್ಷವಾದರೂ ಛತ್ರಿ ಕಳೆದುಕೊಳ್ಳದ ಕುಶಲಕರ್ಮಿಗಳು ನಾವಾಗಿದ್ದೆವು. ಇಂತಹ ಜಡಿ ಮಳೆ, ತುಂತುರು ಮಳೆ, ಮಿಂಚಿನ ಮಳೆ, ಗುಡುಗು ಸಹಿತ ಸುರಿಯುವ ಮಳೆ, ಒಂದೇ ಸಮನೆ ಆಕಾಶಕ್ಕೆ ತೂತು ಬಿದ್ದಂತೆ ಭೋರ್ಗರೆವ ಮಳೆ ಇಂತಹ ಎಲ್ಲ ಮಳೆಯೂ ನಮ್ಮ ಬದುಕನ್ನು ಅದರಲ್ಲೂ ನಮ್ಮ ಕಾಲೇಜು ದಿನಗಳನ್ನು ಸಹ್ಯವಾಗಿಸಿತ್ತು.

ಒಮ್ಮೊಮ್ಮೆ ಕ್ಲಾಸ್‌ರೂಮಿನಲ್ಲಿ ಕುಳಿತ ನನಗೆ ಪಾಠಕ್ಕಿಂತ ಕಿಟಕಿಯಾಚೆ ಬೀಳುತ್ತಿದ್ದ ಮಳೆ ನೋಡುವುದೇ ಖುಷಿ ಕೊಡುತ್ತಿತ್ತು. ರತ್ನಗಿರಿ ಬೋರೆ, ಮುಳ್ಳಯ್ಯನಗಿರಿ, ಬಾಬಾಬುಡನ್ ಗಿರಿ, ಸಹ್ಯಾದ್ರಿ ಬೆಟ್ಟದ ಆ ಹಿನ್ನೆಲೆಯಲ್ಲಿ ಸುರಿಯುತ್ತಿದ್ದ ಮಳೆ ಒಂದು ಕ್ಯಾನ್ವಾಸಿನಂತೆ ಕಾಣುತ್ತಿತ್ತು. ನಿರಂತರವಾಗಿ ಮಳೆ ಸುರಿಯುತ್ತಿದ್ದರಿಂದ ಅನೇಕ ಮನೆಗಳ ಮೇಲೆ ಪಾಚಿ ಬೆಳೆದು, ಗಿಡಗಳು ಬೆಳೆದು, ಅವರ ಮನೆ ಒಂದು ಮಿನಿ ಕಾಡಿನಂತೆ ಕಾಣಿಸುತ್ತಿತ್ತು. ಮಳೆ ಮತ್ತು ಮಲೆನಾಡು ಅವಿನಾಭಾವ ಸಂಬಂಧದಂತೆ ಜೊತೆಯಾಗಿದೆ. ಆ ಕೊಂಡಿಗೆ ಕೆಲವು ವರ್ಷ ನಾನು ಸೇರಿಕೊಂಡೆ. ಆ ಅನುಭೂತಿಯನ್ನು ಅನುಭವಿಸಿದೆ. ಮಳೆ ಬರುವಾಗ ತಿಂದ ಹಲಸಿನ ಹಪ್ಪಳ, ಹಲಸಿನ ಬೀಜ, ಕಷಾಯ ಇಂದಿಗೂ ನನ್ನ ನೆನಪಿನ ಬುತ್ತಿಯಲ್ಲಿದೆ. ನನ್ನ ಬದುಕಿನಲ್ಲಿ ಬೇಸಿಗೆ ಮತ್ತು ಮಳೆಗಾಲವನ್ನು ಸುಂದರವಾಗಿ ಹಿಡಿದಿಡಲು ಗಂಗಾವತಿ ಮತ್ತು ಚಿಕ್ಕಮಗಳೂರು ಬಹು ದೊಡ್ಡ ಪಾತ್ರ ವಹಿಸಿದವು. ●